ಅ.ದಾ. ನಂ.396/2017

ಪಿಡಬ್ಲೂ : 1

ಸಾಕ್ಷಿಯನ್ನು ಇಂದು ದಿನಾಂಕ:26-07-2022 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಶ್ರೀ. ಬಿ ಜಿ ಎನ್ ವಕೀಲರಿಂದ

1. ನಾನು 7 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು 4 ಎಕರೆ 5 ಗುಂಟೆ ಜಮೀನಿನ ಮಾಲಿಕನಿದ್ದೇನೆ. ನಾನು ಈಗ 4 ಎಕರೆ 5 ಗುಂಟೆ ಜಮೀನಿನಲ್ಲಿ ಸ್ವಾಧಿನದಲ್ಲಿದ್ದೇನೆ. ನನ್ನ ಜಮೀನಿನ ಚೆಕ್ಕಬಂದಿ ಪೂರ್ವಕ್ಕೆ ಹಳ್ಳ, ಪಶ್ಚಿಮಕ್ಕೆ ನನ್ನ ಹೊಲ, ದಕ್ಷಿಣಕ್ಕೆ ಒಡ್ಡು ಮತ್ತು ಉತ್ತರಕ್ಕೆ ಒಡ್ಡು ಇದೆ.

2. ನಾನು ಜಮೀನಿಗೆ ಸಂಬಂಧಿಸಿದಂತಹ ದಾಖಲೆಗಳನ್ನು ನೋಡಿರುತ್ತೇನೆ. ಪ್ರತಿವಾದಿಯರ ಜಮೀನಿಗೆ ಸಂಬಂಧಪಟ್ಟ ದಾಖಲೆಗಳನ್ನು 2009 ರಲ್ಲಿ ನೋಡಿರುತ್ತೇನೆ. 1 ನೇ ಪ್ರತಿವಾದಿಯದ್ದು 3 ಎಕರೆ 29 ಗುಂಟೆ ಆಸ್ತಿ ಇದೆ. 2 ನೇ ಪ್ರತಿವಾದಿಗೆ 3 ಎಕರೆ 30 ಗುಂಟೆ ಜಮೀನು ಇದೆ. 29-01-2009 ರಲ್ಲಿ ಪ್ರತಿವಾದಿ ತಮ್ಮ ಉತಾರೆಯಲ್ಲಿ ಕ್ಷೇತ್ರಗಳನ್ನು ಬದಲಾವಣೆ ಮಾಡಿರುತ್ತಾರೆ. ಅದನ್ನು ತಹಶೀಲ್ದಾರ ಕಛೇರಿಯಲ್ಲಿ ಅರ್ಜಿ ನೀಡಿ ಬದಲಾವಣೆ ಮಾಡಿರುತ್ತಾರೆ. ಆ ಕುರಿತು ನನಗೆ 2009 ರಲ್ಲಿ ಮಾಹಿತಿ ಇದೆ. 2009 ರಲ್ಲಿ ನಾನು ದಾಖಲೆಗಳ ವಿರುದ್ದ ಪ್ರಶ್ನೆ ಮಾಡಿ ಮೇಲ್ಮನವಿ ಸಲ್ಲಿಸಿಲ್ಲ ಕಾರಣ ನನಗೆ ಗೊತ್ತಿರಲಿಲ್ಲ. ನನಗೆ 2017 ರಲ್ಲಿ ಬದಲಾವಣೆ ಆಗಿದ್ದು ಕಂಡು ಬಂತು. ನಾನು 2017 ರಲ್ಲಿ ಈ ದಾವೆ ಹೊರತುಪಡಿಸಿ ಕಂದಾಯ ಇಲಾಖೆಗಳಲ್ಲಿ ಮೇಲ್ಮನವಿ ಸಲ್ಲಿಸಿಲ್ಲ.

3. 2009 ರಲ್ಲಿ ಜಮೀನುಗಳನ್ನು ಸರ್ವೇ ಮಾಡಿ ಎಮ್ ಆರ್ ಬದಲಾವಣೆ ಮಾಡಿರುತ್ತಾರೆ ಎಂದರೆ ಸರ್ವೇ ಮಾಡಿಲ್ಲ ಎಂದು ಹೇಳುತ್ತಾರೆ. ನನ್ನ ಪ್ರಕಾರ ಪ್ರತಿವಾದಿಯರು 1 ಎಕರೆ 4 ಗುಂಟೆ ಜಮೀನದ ಕ್ಷೇತ್ರವನ್ನು ಹೆಚ್ಚಿಗೆ ಮಾಡಿಕೊಂಡಿರುತ್ತಾರೆ. 1 ಎಕರೆ 4 ಗುಂಟೆ ಪ್ರತಿವಾದಿಯರು ಚಿಕ್ಕ ನೀರಾವರಿಯವರು ಬಿಟ್ಟ ಜಾಗದಲ್ಲಿ ಅತೀಕ್ರಮಣ ಮಾಡಿರುತ್ತಾರೆ. ಸದರಿ ಚಿಕ್ಕ ನೀರಾವರಿ ಅಧಿಕಾರಿಗಳು ಪ್ರತಿವಾದಿಯರ ವಿರುದ್ದ ಯಾವುದೇ ದಾವೆ ಸಲ್ಲಿಸಿಲ್ಲ.

4. ನನ್ನ ವಾದ ಪತ್ರದಲ್ಲಿ ಚಿಕ್ಕ ನೀರಾವರಿ ಇಲಾಖೆಯವರು ದಾವಾ ಆಸ್ತಿಯನ್ನು ಅತೀಕ್ರಮಣ ಮಾಡಿರುತ್ತಾರೆ ಎಂದು ವಾದ ಪತ್ರದಲ್ಲಿ ಬರೆದಿಲ್ಲ. ಆದರೆ ಹೆಚ್ಚಿಸಿಕೊಂಡಿರುತ್ತಾರೆ ಎಂದು ಬರೆದಿರುತ್ತೇನೆ. ನಾನು ತೋರಿಸಿರುವ ವಾದ ಪತ್ರದ ಜೊತೆಗೆ ಲಗತ್ತಿಸಿದ ಹಾತ ನಕಾಶೆ ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. ನಾನು ತೋರಿಸತಕ್ಕಂತಹ ಒಡ್ಡು ಅದು ಪ್ರತಿವಾದಿಯರಿಗೆ ಸಂಬಂಧಿಸಿದ್ದು ಎಂದರೆ ಸರಿಯಲ್ಲ. ನಾನು ದಾವೆ ಸಲ್ಲಿಸುವ ಪೂರ್ವದಲ್ಲಿ ಅತೀಕ್ರಮಣ ಕುರಿತು

ಭೂ ಮಾಪನ ಇಲಾಖೆಯಲ್ಲಿ ಅರ್ಜಿ ಸಲ್ಲಿಸಿ ಸರ್ವೇ ಮಾಡಿಸಿಲ್ಲ. ನನಗೆ ಯಾವುದೇ ತೊಂದರೆ ಬರದ ಕಾರಣ ನಾನು ಭೂ ಮಾಪನ ಇಲಾಖೆಗೆ ಅರ್ಜಿ ನೀಡಿಲ್ಲ.

5. ಪ್ರತಿವಾದಿಯರು ನನ್ನ ಒಡ್ಡನ್ನು ಒಡೆದು ಅಲ್ಲಿ ಅವರ ಜಾಗ ಬರುತ್ತದೆ ಎಂದು ಮತ್ತು ನನ್ನ ಮಾಲಿಕತ್ವ ನೀರಾಕರಿಸಿದ್ದರಿಂದ ಈ ದಾವೆ ಸಲ್ಲಿಸಿರುತ್ತೇನೆ. ನನ್ನ ಭೂಮಿ ಅಳತೆ ಮಾಡಿಸದೇ ಕೇವಲ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು 4 ಎಕರೆ 5 ಗುಂಟೆ ಜಮೀನಿಗೆ ಮಾಲಿಕನಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ವಿಜಯಪೂರದಲ್ಲಿರುವುದರಿಂದ ಅವರಿಗೆ ತೊಂದರೆ ಕೊಡುವ ಏಕೈಕ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಗೆ ಮುಂದುಡಲಾಯಿತು.**

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ.,
ಸಿಂದಗಿ